ದಿನಾಂಕಃ 02-06-2023 ರಂದು ಆದ ಮಧ್ಯಂತರ ಅರ್ಜಿ ಸಂಖ್ಯೆ 10 ರ ಆದೇಶದ ನಾನು ಈ ದಿನ ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿ ಸಾಕ್ಷಿ ನುಡಿಯಲು ಬಂದಿರುತ್ತೇನೆ .

**ದಿನಾಂಕಃ 15-06-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ . ಸದರಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ವಿಷಯಗಳು ಸತ್ಯವಾಗಿವೆ.

**ಮುಂದುವರೆದ ಮುಖ್ಯ ವಿಚಾರಣೆ: 2 ನೇ ಎದುರುದಾರರ ಪರ ಶ್ರೀ ಎಸ್.ಎಸ್.ಕೆ ವಕೀಲರಿಂದಃ**

ದಾವಣಗೆರೆಯ ಪ್ರಾದೇಶಿಕ ಸಾರಿಗೆ ತನ್ನ ಪರವಾಗಿ ಈ ದಿನ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ನನ್ನನ್ನು ನಿಯೋಜಿಸಿದ್ದಾರೆ ಎನ್ನುವ ಪತ್ರವನ್ನು ಹಾಜರು ಮಾಡಿದ್ದೇನೆ, ಅದನ್ನು ನಿ.ಆರ್-5 ಎಂದು ಗುರುತಿಸಲಾಯಿತು.

ಮಧ್ಯಂತರ ಅರ್ಜಿ ಸಂಖ್ಯೆ.10 ರಲ್ಲಿ ಕೋರಿ ಕೊಂಡಂತೆ

ಮೋಟಾರ್ ಸೈಕಲ್ ನಂ.ಕೆಎ.17/ಹೆಚ್.ಇ–1805 ರ ಚಾಲಕನಾದ ಪರಶುರಾಮ್ ರವರ ಡಿ.ಎಲ್ ಎಕ್ಸಟ್ರಾಕ್ಟನ್ನು ಹಾಜರು ಮಾಡಿದ್ದೇನೆ, ಅದನ್ನು ನಿ.ಆರ್–6 ಎಂದು ಗುರುತಿಸಲಾಯಿತು.

ಸದರಿ ಮೋಟಾರ್ ಸೈಕಲ್ ನಂ.ಕೆಎ.17/ಹೆಚ್.ಇ–1805 ರ ಬಿ–ರಿಜಿಸ್ಟರ ಎಕ್ಸಟ್ರಾಕ್ಟನ್ನು ಹಾಜರು ಮಾಡಿದ್ದೇನೆ, ಅದನ್ನು ನಿ.ಆರ್–7 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಂ.ಸಿ.ಬಿ ವಕೀಲರಿಂದಃ</u>

ನಿ.ಪಿ–8 ರ ಅಂತಿಮ ವರದಿಯಲ್ಲಿ ನಮೂದಿಸಿರುವ 1 ನೇ ಆರೋಪಿ ಪರಶುರಾಮ್ ತಂದೆ ದುರಗಪ್ಪ ಹಾಗು ನಾನು ಈ ದಿನ ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿ.ಆರ್ –6 ರ ಡಿ.ಎಲ್ ನಲ್ಲಿ ನಮೂದಿಸಿರುವ ವ್ಯಕ್ತಿಯ ಹೆಸರು ಪರಶುರಾಮ್ ತಂದೆ ದುರಗಪ್ಪ ಒಂದೇ ಆಗಿರುತ್ತದೆ ಎಂದರೆ ಸರಿ. ನಾನು ದಿನ ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿ.ಆರ್ –6 ರ ಡಿ.ಎಲ್ ದಿಃ 24–02–2009 ರಿಂದ ದಿಃ 23–02–2029 ರವರೆಗೆ ಚಾಲ್ತಿಯಲ್ಲಿ ಇರುತ್ತದೆ . ಸದರಿ

ಅಪಘಾತವಾದ ದಿನ ದಿಃ 09-12-2020 ರಂದು ಸದರಿ ಡಿ.ಎಲ್ ಚಾಲ್ತಿಯಲ್ಲಿತ್ತು ಎಂದರೆ ಸರಿ. ಸದರಿ ವಾಹನದ ಆರ್.ಸಿ ದಿಃ 14-11-2019 ರಿಂದ ದಿಃ 13-11-2034 ರವರೆಗೆ ಚಾಲ್ತಿಯಲ್ಲಿ ಇರುತ್ತದೆ. ಸದರಿ ಅಪಘಾತದ ದಿನದಂದು ಸದರಿ ವಾಹನದ ಆರ್.ಸಿ. ಸೂಕ್ತ ಮತ್ತು ಚಾಲ್ತಿಯಲ್ಲಿತ್ತು ಎಂದರೆ ಸರಿ. ಸದರಿ ನಿ.ಆರ್-7 ರ ದಾಖಲೆಯಲ್ಲಿ ಸದರಿ ವಾಹನದ ಸೀಟಿಂಗ್ ಕ್ಯಾಪ್ಯಾಸಿಟಿ ಎರಡು ಎಂದು ನಮೂದಿಸಿದ್ದೇವೆ ಎಂದರೆ ಸರಿ. ಸದರಿ ನಿ.ಆರ್-7 ರಲ್ಲಿ ನಮೂಾದಿಸಿರುವ ವಾಹನ ಮೋಟಾರ್ ಸೈಕಲ್ ಆಗಿರುವ ಕಾರಣಕ್ಕಾಗಿ ಸದರಿ ವಾಹನದ ಚಾಲಕ ಮತ್ತು ಹಿಂಬದಿ ಸವಾರರು ಅಂದರೆ ಒಟ್ಟು ಇಬ್ಬರಿಗೆ ಸೀಟಿಂಗ್ ಕ್ಯಾಪ್ಯಾಸಿಟಿ ಇರುತ್ತದೆ ಎಂದರೆ ಸರಿ. ಸದರಿ ಅಪಘಾತದ ಸಮಯದಲ್ಲಿ ಸದರಿ ಮೋಟಾರ್ ಸೈಕಲ್ ನ ಹಿಂಬದಿ ಸವಾರ ಹೆಲ್ಮೇಟ್ ನ್ನು ಧರಿಸಿದ್ದರೋ ಅಥವಾ ಇಲ್ಲಾ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ .

ನಾನು ಈ ದಿನ ನ್ಯಾಯಾಲಯಕ್ಕೆ ಸಲ್ಲಿಸಿರುವ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಬರೆಯಲು ಮಾಹಿತಿಯನ್ನು ನಾನೇ ನೀಡಿದ್ದೇನೆ. ನಾನು ಈ ದಿನ ನ್ಯಾಯಾಲಯಕ್ಕೆ ಸಲ್ಲಿಸಿರುವ ನನ್ನ ಮುಖ್ಯ

ವಿಚಾರಣೆಯ ಪ್ರಮಾಣ ಪತ್ರದ 1 ಪುಟದ ಕೊನೆಯ ಪ್ಯಾರಾದಲ್ಲಿ ಸದರಿ ಮೋಟಾರ್ ಸೈಕಲ್ ನ ಸವಾರ ಹಾಗು ಹಿಂಬದಿ ಸವಾರ ಹೆಲ್ಮೆಟ್ ನ್ನು ಧರಿಸದೇ ಸದರಿ ಮೋಟಾರ್ ಸೈಕಲ್ ನ್ನು ಚಾಲನೆ ಮಾಡಲು ಸದರಿಯವರಿಗೆ ಕಾನೂನಿನ ಅಡಿಯಲ್ಲಿ ಅವಕಾಶ ಇರುವುದಿಲ್ಲ ಮತ್ತು ಸದರಿ ಮೋಟಾರ್ ಸೈಕಲ್ ನಲ್ಲಿ ಇಬ್ಬರು ಹಿಂಬದಿ ಸವಾರರು ಎಂದು ಪ್ರಯಾಣಿಸಲು ಸಹ ಎಂ.ವಿ.ಆ್ಯಕ್ಟ ಮತ್ತು ರೂಲ್ಸನ ಅಡಿಯಲ್ಲಿ ಅವಕಾಶ ಇರುವುದಿಲ್ಲ ಎಂದು ನಾನೇ ಹೇಳಿಸಿ ಬರೆಸಿರುತ್ತೇನೆ . ಸದರಿ ಅಪಘಾತದ ಸಮಯದಲ್ಲಿ ಸದರಿ ಮೋಟಾರ್ ಸೈಕಲ್ ಸವಾರ ಹೆಲ್ಮೆಟ್ ನ್ನು ಧರಿಸಿದ್ದರೋ ಅಥವಾ ಇಲ್ಲ ಎನ್ನುವ ಬಗ್ಗೆ ಮತ್ತು ಸದರಿ ಮೋಟಾರ್ ಸೈಕಲ್ ನಲ್ಲಿ ಎಷ್ಟು ಜನ ಹಿಂಬದಿ ಸವಾರರು ಪ್ರಯಾಣಿಸುತ್ತಿದ್ದರು ಎನ್ನುವ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲದೇ ಇರುವ ಕಾರಣಕ್ಕಾಗಿ ಸದರಿ ವಿಷಯವನ್ನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಉಲ್ಲೇಖಿಸುವ ಅಧಿಕಾರ ನನಗೆ ಇರುವುದಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಯಾವುದೇ ಉತ್ತರವನ್ನು ನೀಡದೇ ಸುಮ್ಮನೆ ನಿಂತಿರುತ್ತಾರೆ .

R.W-3

**<u>ಪಾಟೀ ಸವಾಲುಃ</u>** 1 ನೇ ಎದುರುದಾರರ ಪರ ವಕೀಲರಾದ ಶ್ರೀ ಎಂ.ಎಂ.ಎಲ್ ವಕೀಲರು ಅರ್ಜಿದಾರರ ಪಾಟೀ ಸವಾಲನ್ನೇ ಅನುಮೋದಿಸಿಕೊಳ್ಳಲು ಕೋರಿರುತ್ತಾರೆ , ಸದರಿ ಮನವಿಯನ್ನು ಅಂಗೀಕರಿಸಲಾಗಿದೆ.

**<u>ಮರು ವಿಚಾರಣೆಃ ಏನೂ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.